ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ಬಾಲಪ್ಪನವರು ಮಾಡಿಕೊಂಡಿದ್ದ ಸೇವಾ ಸಮಿತಿಯ ಪರವಾಗಿ ನಿಮಗೆ ಸಂಬಳ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಶ್ರೀನಿವಾಸ ಶೆಟ್ಟಿರವರ ಕಡೆಯಿಂದ 1974 ರಿಂದ 1976ನಮ್ಮ ತಂದೆಯವರು ಪಡೆದುಕೊಳ್ಳುತ್ತಿದ್ದರು ನಂತರದಲ್ಲಿ ಶ್ರೀನಿವಾಸ ಶೆಟ್ಟಿರವರು ತೀರಿಕೊಳ್ಳುವವರಗೂ ನಾನು ಸಂಬಳ ಪಡೆದುಕೊಳ್ಳುತ್ತಿದ್ದೆ. ಅವರು ತೀರಿಕೊಂಡ ದಿನಾಂಕ ನನಗೆ ನೆನಪಿಲ್ಲ.

ನಮ್ಮ ತಂದೆಗೆ 4 ಜನ ಮಕ್ಕಳು, ಮೊದಲನೇಯವರು ರಾಜಗೋಪಾಲಚಾರ್, 2ನೇಯವರು ಶೇಷಾಚಾರ್ ಮತ್ತು 3ನೇಯವರು ನಾನು, 4ನೇಯವರು ಗೋಪಾಲಕೃಷ್ಣಾಚಾರ್ ಅವರನ್ನು ದತ್ತು ಕೊಟ್ಟಿರುತ್ತಾರೆ, 4 ಜನರನ್ನು ಹೊರತುಪಡಿಸಿ ಬೇರೆ ಗಂಡು ಮಕ್ಕಳು ನಮ್ಮ ತಂದೆಗೆ ಇರಲಿಲ್ಲ. ನಮ್ಮ ತಾತನ ಹೆಸರು ವೆಂಕಟರಮಣಾಚಾರ್. ನಮ್ಮ ಕುಟುಂಬದಲ್ಲಿ ಎ.ಎಸ್ ಆಚಾರ್ಯ ಎನ್ನುವವರು ಯಾರು ಇರಲಿಲ್ಲ.

ಶೆಟ್ಟಿ ಕುಟುಂಬದವರು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ದಿನಾಂಕ 08.06.1956ರಲ್ಲಿ ಎ.ಎಸ್ ಆಚಾರ್ಯ ಎಂಬ ಅರ್ಚಕರನ್ನು ಪೂಜೆ ಮಾಡಲು ನೇಮಿಸಿಕೊಂಡು ಸಂಬಳ ಕೊಡುತ್ತಿದ್ದೇವೆ ಎಂದು ಫ್ಯಾಮಿಲಿ ಲೆಡ್ಜರ್ ಬುಕ್ ನಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎ.ಎಸ್ ಆಚಾರ್ಯ ಅರ್ಚಕರಾಗಿದ್ದಾರೋ ಇಲ್ಲವೋ ಎಂಬ ಬಗ್ಗೆ ನಾನು ಕೇಳಿ ತಿಳಿದುಕೊಂಡಿಲ್ಲ.

ನನಗೆ ಇಬ್ಬರು ಗಂಡು ಮಕ್ಕಳು ಅವರ ಹೆಸರು ಹರೀಶ ಮತ್ತು ನವೀನ್ ಕುಮಾರ್. ದೊಡ್ಡ ಮಗನಿಗೆ ಕಿಡ್ನಿ ಸಮಸ್ಯೆಯಿಂದ ತೀರಿಕೊಂಡಿರುತ್ತಾರೆ ಎಂದರೆ ಸರಿ.

ನನಗೆ ಕರ್ನಾಟಕ ಬ್ಯಾಂಕ್ ಖಾತೆ ಇತ್ತು ಅದನ್ನು ಆಕ್ಸಿಸ್ ಬ್ಯಾಂಕ್ ಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ಅಂಚೆ ಕಛೇರಿಯಲ್ಲಿ ಖಾತೆ ಇಟ್ಟುಕೊಂಡಿರುತ್ತೇನೆ. ಕೆನರಾ ಬ್ಯಾಂಕಿನಲ್ಲಿ ನನ್ನ ತಾಯಿಯ ಅಕೌಂಟ್ ಇದೆ ನಾನು ಇಟ್ಟುಕೊಂಡಿಲ್ಲ, ನನ್ನ ಕರ್ನಾಟಕ ಬ್ಯಾಂಕ್ ಅಕೌಂಟ್ ಗೆ ಕೋದಂಡರಾಮ ಸ್ವಾಮಿ ಸೇವಾ ಸಮಿತಿಯಿಂದ ರೂ 8500/- ಪ್ರತಿ ತಿಂಗಳು ನಿಮ್ಮ ಖಾತೆಗೆ ವರ್ಗಾವಣೆಯಾಗಿದೆ ಎಂದು ಸಾಕ್ಷಿಗೆ ಬ್ಯಾಂಕ್ ಸ್ಟೇಟ್ಮೆಂಟ್ ತೋರಿಸಿ ಕೇಳಿದಾಗ ಸಾಕ್ಷಿ ಇಲ್ಲ ನನ್ನ ಅಕೌಂಟ್ ಗೆ ಯಾವುದೇ ಹಣ ಬಂದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 06.04.2020ಕ್ಕೆ ನಿಮ್ಮ ಮಗ ಹರೀಶ್ ಬಾಬು ರವರ ಚಿಕಿತ್ಸೆಗೆ 45 ಸಾವಿರ ಹಣವನ್ನು ಸಹ ಕೋದಂಡರಾಮ ಸ್ವಾಮಿ ಸೇವಾ ಸಮಿತಿಯಿಂದ ನಿಮ್ಮ ಖಾತೆಗೆ ಹಣ ವರ್ಗವಣೆಯಾಗಿದೆ ಎಂದು ಕೇಳಿದಾಗ ಸಾಕ್ಷಿ ದಾಖಲೆ ನೋಡಿ ನನ್ನ ಅಕೌಂಟ್ ಗೆ ಯಾವುದೇ ಹಣ ಬಂದಿಲ್ಲ ಎಂದು ನುಡಿಯುತ್ತಾರೆ.

ಕರ್ನಾಟಕ ಬ್ಯಾಂಕಿನಲ್ಲಿ ಮೊದಲ ಬಾರಿ ನಾನು ಖಾತೆ ತೆಗೆದಿರುತ್ತೇನೆ. ನನಗೆ ವರ್ಷ ನೆನಪಿಲ್ಲ. ಅಂಚೆ ಕಛೇರಿಯಿಂದ ಸಂಬಳವನ್ನು ನನ್ನ ಕೈಗೆ ಕೊಡುತ್ತಿದ್ದರು. ಅಕೌಂಟ್ ಓಪನ್ ಮಾಡಿದ್ದೇನೆ. ಬಿಡದಿಯಲ್ಲಿ ಕೆನರಾ ಬ್ಯಾಂಕು ಹೊರತುಪಡಿಸಿ 2005-06ರವರಗೆ ಯಾವುದೇ ಬ್ಯಾಂಕು ಇರಲಿಲ್ಲ ಎಂದರೆ ಸರಿ. ನಾನು ಯಾವುದೇ ವ್ಯವಹಾರ ಮಾಡಬೇಕಾದರೆ ಅಂಚೆ ಕಛೇರಿಯಿಂದಲೇ ಮಾಡುತ್ತಿದ್ದೆ ಎಂದರೆ ಸರಿ. ಅಂಚೆ ಕಛೇರಿಯಿಂದ

ಯಾರಿಗಾದರೂ ಮನಿ ಆರ್ಡರ್ ಮಾಡಬೇಕಾಗಿತ್ತು ಎಂದರೆ ಸರಿ.

ಶೆಟ್ಟಿ ಕುಟುಂಬದವರು ಪೌರೋಹಿತ್ಯ ಸಂಬಾವನೆಯನ್ನು ನಿಮಗೆ ಮನಿ ಆರ್ಡರ್ ಮಾಡಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಶೆಟ್ಟರ ಕುಟುಂಬದಲ್ಲಿ ಶ್ರೀನಿವಾಸಯ್ಯನವರು ಇದ್ದಾಗ ನನಗೆ ತಿಂಗಳಿಗೆ 15 ಸಾವಿರ ಸಂಬಳ ಕೊಡುತ್ತಿದ್ದರು. ಶ್ರೀನಿವಾಸಯ್ಯನವರು 15 ಸಾವಿರ ಸಂಬಳ ನಿಮಗೆ ಕೊಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ, ಕೈಗೆ ಹಣ ಕೊಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಆಕ್ಸಿಸ್ ಬ್ಯಾಂಕ್ ಸ್ಟೆಟ್ಮೆಂಟ್ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಪಿ-7ರ ಪ್ರಕಾರ ಜಾಯಿಂಟ್ ಹೊಲ್ಡರ್ ಕೋದಂಡರಾಮ ಸ್ವಾಮಿ ಎಂದು ಇದೆ ಎಂದರೆ ಸಾಕ್ಷಿ ನನ್ನ ಮಗನ ಜೊತೆ ಇರಬೇಕು ಎಂದು ನುಡಿಯುತ್ತಾರೆ. ನಿಪಿ-7ರ ಪ್ರಕಾರ ದಿನಾಂಕ 01.04.2024 ರಿಂದ 30.12.2025ರವರೆಗಿನ ಸ್ಟೆಟ್ಮೆಂಟ್ ಹಾಜರುಡಿಸಿರುತ್ತೇನೆ ಎಂದರೆ ಸರಿ. ಅಕೌಂಟ್ ಅನ್ನು ಅದೇ ದಿನಾಂಕದಂದು ತೆರೆದಿದ್ದೇನೆ. ಅದಕ್ಕೂ ಮೊದಲು ನಾನು ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆ ತೆರೆದಿದ್ದೆನು ಎಂದರೆ ಸರಿ.

2021ಕ್ಕೂ ಮೊದಲು ಶೆಟ್ಟರ ಕುಟುಂಬದಿಂದ ನಿಮ್ಮ ಖಾತೆಗೆ ಸಂಬಳ ಬಂದಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ದಾವೆ ಹಾಕಿದ ನಂತರ ಶೆಟ್ಟರ ಕುಟುಂಬದವರು ನಿಮ್ಮ ವಿಶ್ವಾಸಗಳಿಸುವ ಉದ್ದೇಶದಿಂದ ನಿಮ್ಮ ಖಾತೆಗೆ ಸಂಬಳದ ಹಣವನ್ನು ಸಂದಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲು ಕೈಗೆ ಕೊಡುತ್ತಿದ್ದರು ನಂತರ ಬ್ಯಾಂಕ್ ಖಾತೆಗೆ ಹಾಕುತ್ತಿದ್ದಾರೆ ಎಂದು ನುಡಿಯುತ್ತಾರೆ.

ದಿನಾಂಕ 15.07.1977ರಲ್ಲಿ ಟಿ.ಎಸ್ ಶ್ರೀನಿವಾಸ ರವರು ತೀರಿಕೊಂಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. 2024 ರಿಂದ 2025ರವರೆಗೂ ನನಗೆ 12 ಸಾವಿರ ಸಂಬಳವನ್ನು ಕೊಡುತ್ತಿದ್ದಾರೆ. ನನಗೆ 15 ಸಾವಿರ ಸಂಬಳ ಕೊಡುತ್ತಿದ್ದರು ಎಂದು ಹೇಳಿದ್ದೇನೆ ಆದರೆ ಈಗ ನನಗೆ 12 ಸಾವಿರ ಸಂಬಳ ಕೊಡುತ್ತಿದ್ದಾರೆ ಎಂದು ಅಕೌಂಟ್ ಸ್ಟೇಟ್ಮೆಂಟ್ ಹಾಜರುಪಡಿಸಿದ್ದೇನೆ, ಶೆಟ್ಟಿ ಕುಟುಂಬದವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1977ರಲ್ಲಿ 15 ಸಾವಿರ ತೆಗೆದುಕೊಳ್ಳುತ್ತಿದ್ದೇನೆ ಎಂದು ಹೇಳಿರುತ್ತೀರಿ ಸಂಬಳ ಏರು ಮುಖವಾಗಬೇಕು ಎಂದರೆ ಸಾಕ್ಷಿಯು ಈಗ ಇಷ್ಟು ತೆಗೆದುಕೊಳ್ಳಿ ಮುಂದೆ ನೋಡೋಣ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಬ್ಯಾಂಕಿನ ಸ್ಟೇಟ್ಮೆಂಟ್ ಪ್ರಕಾರ ನನಗೆ 10 ಸಾವಿರ ಒಂದು ಬಾರಿ 2 ಸಾವಿರ ಒಂದು ಬಾರಿ ಸಂಬಳ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಏಕೆ ಆ ರೀತಿ ಕೊಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕೋದಂಡರಾಮ ಸ್ವಾಮಿ ದೇವಾಲಯದ ಸೇವಾ ಸಮಿತಿಯಿಂದ ನಾನು 2021ರವರಗೆ ಸಂಬಳ ಪಡೆದುಕೊಂಂಡಿರುತ್ತೇನೆ ಎಂದರೆ ಸರಿಯಲ್ಲ. 2008ರಲ್ಲಿ ಕೋದಂಡರಾಮ ಸ್ವಾಮಿ ದೇವಾಲಯದ ಸೇವಾ ಸಮಿತಿ ನೋಂದಣಿಗೊಳ್ಳುವ ಪೂರ್ವದಲ್ಲಿ ರಾಮಮೂರ್ತಿಕಡೆಯಿಂದ ನೀವು ಯಾವುದೇ ಸಂಬಳ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮರಿಯಪ್ಪನವರು ಅಧ್ಯಕ್ಷರಾಗಿ, ಆನಂದ ಕುಮರ್ ಕಾರ್ಯದರ್ಶಿ ಮತ್ತು ದೀಪಕ್ ಖಜಾಂಜಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಮರಿಯಪ್ಪ, ಆನಂದ ಕುಮರ್ ಮತ್ತು ದೀಪಕ್ ರವರ ಪರಿಚಯ ನನಗೆ ಇದೆ.

ವಾದಿಗಳು ಹಾಜರುಪಡಿಸಿರುವ ಫೋಟೋಗಳಲ್ಲಿ ಕಾಣುತ್ತಿರುವ ಮಳಿಗೆಗಳನ್ನು ಯಾರು ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಟ್ಟಡಗಳು ದೇವಸ್ಥಾನಕ್ಕೆ ಸೇರಿದೆ. ದೇವಸ್ಥಾನ ಸಮಿತಿಯಿಂದ ಕಟ್ಟಡಗಳನ್ನು ಬಾಡಿಗೆ ಕೊಟ್ಟು ಬಾಡಿಗೆ ಸಹ ಪಡೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಾಡಿಗೆ ವರಮಾನದಿಂದ ನಿಮಗೆ ಸಂಬಳ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 13.09.2002ರಲ್ಲಿ ರಾಮನಗರದ ಉಪವಿಭಾಗಾಧಿಕಾರಿಗಳು ಕೋದಂಡರಾಮಸ್ವಾಮಿ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದೆ ಎಂದು ಆದೇಶ ಹೊರಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಆದೇಶದ ಮೇರೆಗೆ ಪ್ರತಿವಾದಿ ಸೇವಾ ಸಮಿತಿಯು ಕಟ್ಟಡಗಳನ್ನು ನಿರ್ಮಾಣ ಮಾಡಿ ಅಭಿವೃದ್ಧಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-20 ಮತ್ತು ನಿಪಿ-21ರಲ್ಲಿ ನನ್ನ ಪಾಸ್ ಪುಸ್ತಕವು 2023ರಿಂದ ಎಂಟ್ರಿಯಾಗಿರುವುದನ್ನು ಮಾತ್ರ ಹಾಜರುಪಡಿಸಿದ್ದು ಅದರ ಪೂರ್ವದ ಎಂಟ್ರಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಬ್ಯಾಂಕಿನಿಂದ ತಂದು ಹಾಜರುಪಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿನ ಸಂಪೂರ್ಣ ಪಾಸ್ ಪುಸ್ತಕವನ್ನು ಹಾಜರುಪಡಿಸಿದರೆ ಸೇವಾ ಸಮಿತಿಯಿಂದ ಪಡೆದುಕೊಂಡ ಸಂಬಳ ಕಾಣಿಸಿಕೊಳ್ಳುತ್ತದೆ ಎಂಬ ಉದ್ದೇಶದಿಂದ ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆ ಸಲ್ಲಿಸುವ ಮೊದಲು ಪ್ರತಿವಾದಿ ಟ್ರಸ್ಟ್ ನಿಂದ ನಾನು ಸಂಬಳ ಪಡೆದುಕೊಂಡು ನಂತರ ವಾದಿ ಕುಟುಂಬದದಿಂದ ಹೆಚ್ಚಿನ ಹಣ ಪಡೆದುಕೊಳ್ಳುತ್ತಿರುವುದರಿಂದ ನಾನು ಅವರಿಗೆ ಅನಕೂಲವಾಗಲೀ ಎಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 13.11.2025 ರಂದು 30 ಸಾವಿರ ಮತ್ತು 6 ಸಾವಿರ ಹಣ ವಾದಿಯ ಅಕೌಂಟ್ ನಿಂದ ನನ್ನ ಅಕೌಂಟ್ ಗೆ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ದಿನಾಂಕ 13.11.2025 ರಿಂದ 01.01.2026ರವರಗೆ ವಾದಿ ಕುಟುಂಬದದಿಂದ ಹಣ ಸಂದಾಯವಾಗಿರುವ ಬಗ್ಗೆ ಯಾವುದೇ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಮಾಡಿಸಿಕೊಂಡು ಬರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಸಂಬಳ ಇದ್ದಕ್ಕಿದ್ದ ಹಾಗೆ 24 ಸಾವಿರ ಕೊಡಲು ಪ್ರಾರಂಭಿಸಿರುತ್ತಾರೆ ಎಂದರೆ ಸಾಕ್ಷಿ ಒಂದು ಬಾರಿ ಚೆಕ್ ಪಾಸ್ ಆಗಲಿಲ್ಲ ಆದ್ದರಿಂದ ಹೆಚ್ಚಿನ ಸಂಬಳ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದಾದ ನಂತರ ನನಗೆ 12 ಸಾವಿರ ಸಂಬಳ ಕೊಡುತ್ತಿದ್ದಾರೆ.

ದಿನಾಂಕ 09.10.2025 ರಿಂದ 20 ಸಾವಿರ ಮತ್ತು 4 ಸಾವಿರದಂತೆ ಪ್ರತಿ ತಿಂಗಳು ವಾದಿ ಕುಟುಂಬದಿಂದ ಬರುತ್ತಿದೆ ಎಂದರೆ ಸಾಕ್ಷಿ ನನ್ನ ಗಮನಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ. ದೇವಸ್ಥಾನಕ್ಕೂ ಮತ್ತು ಸೇವಾ ಸಮಿತಿಗೆ ವಾದಿ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ವಾದಿ ಕುಟುಂಬದವರು ನನ್ನ ಕಡೆಯಿಂದ ಸುಳ್ಳು ಸಾಕ್ಷಿ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ವೆಂಕಟರಮಣ ಶೆಟ್ಟಿರವರು ಅವರ ಜೀವಿತಾ ಕಾಲದಲ್ಲಿ ಯಾವುದೇ ಟ್ರಸ್ಟ್ ಮಾಡಿಲ್ಲ ಎಂದರೆ ನನಗೆ ನೆನಪಿಲ್ಲ.

ನನ್ನ ತಂದೆಯವರು ಪೂಜೆ ಪುನಸ್ಕಾರ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗಿಂತ ಮುಂಚೆ ಎ.ಎಸ್. ಆಚಾರ್ಯವರು ಪೂಜೆ ಮಾಡುತ್ತಿದ್ದರು ನಂತರದಲ್ಲಿ ನಾನು ಪೌರೊಹಿತ್ಯ ಮಾಡುತ್ತಿದ್ದೆ ಎಂದರೆ ನನಗೆ ನೆನಪಿಲ್ಲ. 1976ರಿಂದ ನಾನು ಪೌರೋಹಿತ್ಯ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ಇಲ್ಲ ನಾನು 1974ರಿಂದ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಟ್ರಸ್ಟ್

ರಿವೊಕೇಷನ್ ಮಾಡಿಕೊಂಡಾಗಿನಿಂದ ವಾದಿ ಕುಟುಂಬಕ್ಕೂ ಮತ್ತು ದೇವಸ್ಥಾನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸತ್ಯ ನಾರಾಯಣ ಗುಪ್ತದವರು ವಾದಿ ಕುಟುಂಬಕ್ಕೆ ಸೇರಿದವರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ದಾಖಲೆ ಕೊಟ್ಟಿಲ್ಲ ಆದರೆ ಬರುತ್ತಿದ್ದರು. ಎಸಿ ಆದೇಶದ ನಂತರ ಪ್ರತಿವಾದಿಗಳು ಎಲ್ಲಾ ಜಾತಿಯವರನ್ನು ಸದ್ಯಸ್ಯರನ್ನಾಗಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಾಲಪ್ಪನವರು ಮತ್ತು ಸತ್ಯನಾರಾಯಣ ಗುಪ್ತರವರು ಸಹ ಟ್ರಸ್ಟ್ ನ ಸದಸ್ಯರಾಗಿದ್ದರು ಎಂದರೆ ಸರಿ. ಸದಸ್ಯತ್ವ ಮಾಡಿಕೊಂಡಾಗಿನಿಂದ ಪ್ರತಿವಾದಿ ಟ್ರಸ್ಟ್ ನವರು ದೇವಸ್ಥಾನದ ಎಲ್ಲಾ ವ್ಯವಹಾರಗಳನ್ನು ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಯಾರೂ ಏನೂ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿ ಇಬ್ಬರ ಕಡೆಯಿಂದಲೂ ಸಂಬಳ ಪಡೆದುಕೊಂಡು ಇಬ್ಬರಿಗೂ ಮೋಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ನ್ಯಾಲಯಾಲಯದಲ್ಲಿ ಹಣ ಡೆಪಾಸಿಟ್ ಆಗಿ ನ್ಯಾಯಾಲಯದಿಂದ ಸಂಬಳ ಪಡೆದುಕೊಳ್ಳಬೇಕು ಎಂದು ಆದೇಶ ಮಾಡಿದ್ದರೂ ಸಹ ವಾದಿ ಕುಟುಂಬದಿಂದ ನೇರವಾಗಿ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸಾಕ್ಷಿ ವಂಶಿಕರಿಂದ ಪಡೆದುಕೊಳ್ಳುತ್ತಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.